ಅವರಲ್ಲಿ ಉತ್ಸಾಹ ತಂದುಕೊಟ್ಟಿತ್ತು. ಅಲ್ಲಿಂದ ಧಾರಾವಾಹಿಯೆಡೆಗೆ ಅವರ ಹಾದಿ ಹೊರಳಿತು. 'ಉಘೇ ಉಘೇ ಮಾದೇಶ್ವರ' ಧಾರಾವಾಹಿಯಲ್ಲಿ ಕಾಣಿಸಿಕೊಂಡರು. ತಮ್ಮ ನಟನೆಯನ್ನು ಹರಿತಗೊಳಿಸಿಕೊಳ್ಳಲು ರಂಗಭೂಮಿಯ ಅವಶ್ಯಕತೆಯನ್ನೂ ಅರಿತು, ಧಾರಾವಾಹಿ ನಂತರ 'ನೀನಾಸಂ'ನ 'ಆ್ಯಕ್ಟ್ ರಿಯಾಕ್ಟ್' ರಂಗತಂಡಕ್ಕೆ ಸೇರಿದರು. ಒಂದೂವರೆ ತಿಂಗಳ ಕಾರ್ಯಾಗಾರದ ನಂತರ 'ಧನ್ವಂತರಿ ಚಿಕಿತ್ಸೆ' ಎನ್ನುವ ನಾಟಕ ಮಾಡಿದರು. ಪ್ರಧಾನ ಪಾತ್ರಧಾರಿ, ವಿಶ್ವಾಮಿತ್ರನಾಗಿ ಅಭಿನಯಿಸಿದ ಅವರಿಗೆ ಅಲ್ಲಿಯೂ ಹೊಗಳಿಕೆ ಉಡುಗೊರೆಯಾಗಿ ಬಂದಿತ್ತು.

ಆನಂತರ ಅವರು ಕಾಣಿಸಿಕೊಂಡಿದ್ದು 'ಕನಸಿನ ಮಳೆಯಾದಳು' ಎಂಬ ಮೈಕ್ರೊ ಫಿಲಂನಲ್ಲಿ. 50 ನಿಮಿಷದ, ಪ್ರೀತಿಯ ಕಥಾ ಹಂದರದ ಮಿನಿ ಸಿನಿಮಾದಲ್ಲಿ ಕಥೆಗೆ ತಕ್ಕ ಅಭಿನಯವನ್ನು ನೀಡಿದ್ದ ಅವರಿಗೆ ಬೆಳ್ಳಿತೆರೆ ತೆರೆದುಕೊಂಡದ್ದು 'ಆನ' ಸಿನಿಮಾ ಮೂಲಕ.

ನಟಿ ಅದಿತಿ ಪ್ರಭುದೇವ ಅವರೊಂದಿಗೆ, ಹೊಸಬರೇ ಇದ್ದ ಫ್ಯಾಂಟಸಿ ಥ್ರಿಲ್ಲರ್ ಸಿನಿಮಾ ಪ್ರಯೋಗಶಾಲೆ ಆಗಿತ್ತು. ಥಿಯೇಟರ್‌ನಲ್ಲಿ ದೊಡ್ಡ ಯಶಸ್ಸು ಕಾಣದಿದ್ದರೂ ಕಲಾವಿದರ ಬಗ್ಗೆ ಒಳ್ಳೆಯ ಅಭಿಪ್ರಾಯಗಳು ಕೇಳಿಬಂದವು. ಅದಾದ ಮೇಲೆ 'ಮೇರಿ' ಸಿನಿಮಾದಲ್ಲಿ ಪೊಲೀಸ್ ಪಾತ್ರಧಾರಿಯಾಗಿ ತಮ್ಮ ನಟನಾ ಕೌಶಲವನ್ನು ನಿರೂಪಿಸಿದರು ವಿಕಾಶ್.

ವಿಕಾಶ್ ಅವರಿಗೆ ಲವ್ ಸಬ್ಜೆಕ್ಟ್ ಸಿನಿಮಾದಲ್ಲಿ ಕಾಣಿಸಿಕೊಳ್ಳುವ ಹಂಬಲ. ಭಾವನಾತ್ಮಕ ಅಭಿನಯ ನನ್ನ ಪ್ಲಸ್‌ಪಾಯಿಂಟ್ ಎನ್ನುವ ಅವರು, ಲವ್‌ಸ್ಟೋರಿ ಸಿನಿಮಾಗಳು ತಮಗೆ ಚೆನ್ನಾಗಿ ಒಪ್ಪಬಲ್ಲವು ಎಂಬುದನ್ನು ಕಂಡುಕೊಂಡಿದ್ದಾರೆ. ಇದರೊಂದಿಗೆ, ಆ್ಯಕ್ಷನ್, ರೆಬಲ್ ಪಾತ್ರಗಳೂ ಅವರಿಷ್ಟದವು. ಎಲ್ಲ ಕಲಾವಿದರಂತೆ, ತಮಗೂ ಬಹುವಿಧದ ಪಾತ್ರಗಳಲ್ಲಿ ತೊಡಗಿಸಿಕೊಳ್ಳುವ ಆಸೆ ಎನ್ನುತ್ತಾರೆ.

ನಟನೆಯೊಂದಿಗೆ, ಬೆಂಗಳೂರಿನಲ್ಲಿ ನಾಲ್ಕು ವರ್ಷಗಳಿಂದ ಕಾನೂನು ಸಂಸ್ಥೆ (ಲಾ ಫರ್ಮ್) ನಡೆಸುತ್ತಿದ್ದಾರೆ.

'ವಕೀಲಿಕೆ– ಸಿನಿಮಾ ಎರಡೂ ನನ್ನಿಷ್ಟದ ಕೆಲಸ. ಆದರೆ ಸಿನಿಮಾ ಪ್ರೀತಿ ಹೆಚ್ಚು, ಇದೇ ಗುರಿ. ಒಂದಷ್ಟು ಜನರಿಗೆ ಸಹಾಯ ಮಾಡಲು ವಕೀಲಿಕೆ ಜೊತೆಗಿದೆ. ಸಿನಿಮಾ, ನನ್ನನ್ನು ಜನರ ಬಳಿಗೆ ಕೊಂಡೊಯ್ಯಲು ದಾರಿಯಾಗುವ ಸಾಧನವೆಂದು ಭಾವಿಸಿದ್ದೇನೆ' ಎನ್ನುತ್ತಾರೆ.

ಸದ್ಯ, ಅಭಿಜಿತ್ ತೀರ್ಥಹಳ್ಳಿ ಚೊಚ್ಚಿಲ ನಿರ್ದೇಶನದ 'ಅಪಾಯವಿದೆ ಎಚ್ಚರಿಕೆ' ಸಿನಿಮಾದಲ್ಲಿ ಹೀರೊ ಆಗಿ ವಿಕಾಶ್ ನಟಿಸುತ್ತಿದ್ದಾರೆ. 'ಇದು ಅಡ್ವೆಂಚರ್ ಥ್ರಿಲ್ಲರ್ ಸಿನಿಮಾ. ಕಾಮಿಡಿ, ಪ್ರೀತಿ, ಹಾರರ್, ಒಟ್ಟಾರೆ ಇದು ಪಕ್ಕಾ ಕಮರ್ಷಿಯಲ್ ಪ್ಯಾಕೇಜ್. ನನ್ನ ಪಾತ್ರ ಕೂಡ ಅಷ್ಟೇ ಥ್ರಿಲ್ಲಿಂಗ್ ಆಗಿರಲಿದೆ. ಜನರಿಗೆ ಇಷ್ಟವಾಗಲಿದೆ' ಎಂದು ಭರವಸೆ ವ್ಯಕ್ತಪಡಿಸುತ್ತಾರೆ. ■

# ಬೆಳ್ಳಿತೆರೆಯಲ್ಲಿ ಅಕ್ಷಿತಾ ರೇಸ್ ಆರಂಭ



**ತೆಲುಗು ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ಕನ್ನಡತಿ ಅಕ್ಷಿತಾ ಸತ್ಯನಾರಾಯಣ, ಇದೀಗ ಚಂದನವನದ ರೇಸ್‌ನಲ್ಲಿದ್ದಾರೆ.**

ಮಾಡೆಲಿಂಗ್ ಮಾಯಾಲೋಕದಲ್ಲಿ ಮಿಂಚಿ, ತೆಲುಗು ಧಾರಾವಾಹಿಗಳಲ್ಲಿ ನಟಿಸುತ್ತಿದ್ದ ನಟಿ ಅಕ್ಷಿತಾ ಸತ್ಯನಾರಾಯಣ, ಇದೀಗ ಚಂದನವನದ ಅಂಗಳಕ್ಕೆ ಕಾಲಿಟ್ಟಿದ್ದಾರೆ. ನಾಯಕ ನಟಿಯಾಗಿ ಕನ್ನಡ ಚಿತ್ರರಂಗಕ್ಕೆ ಪರಿಚಯವಾಗುತ್ತಿದ್ದಾರೆ.

ಅಕ್ಷಿತಾ ಕನ್ನಡದವರೇ ಆಗಿದ್ದರೂ ತೆಲುಗು ಧಾರಾವಾಹಿಗಳಲ್ಲಿ ಕಾಣಿಸಿಕೊಂಡಿದ್ದೇ ಹೆಚ್ಚು. ತೆಲುಗಿನ ಕೆಲವು ಧಾರಾವಾಹಿಗಳಲ್ಲಿ ನಟಿಸಿದ್ದ ಅವರಿಗೆ ಇದೀಗ ಕನ್ನಡ ಬೆಳ್ಳಿತೆರೆಯಲ್ಲಿ ಅವಕಾಶವೊಂದು ಹುಡುಕಿಕೊಂಡು ಬಂದಿದೆ. ಹಿರಿತೆರೆಯಲ್ಲಿ ರೇಸ್‌ಗಿಳಿದು ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ. 'ರೇಸರ್' ಸಿನಿಮಾ ಮೂಲಕ ಕನ್ನಡಕ್ಕೆ ಬರುತ್ತಿರುವ ಅಕ್ಷಿತಾ, ಬೈಕ್ ರೇಸರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸಿನಿಮಾಗೆಂದು ಬೈಕ್ ರೇಸ್ ಅನ್ನೂ ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಐಷಾರಾಮಿ ಬೈಕ್ ಮೇಲೆ ಅಕ್ಷಿತಾ ಕುಳಿತಿರುವ ಚಿತ್ರದ ಸಿನಿಮಾ ಪೋಸ್ಟರ್ ಕೂಡ ಈಚೆಗೆ ಬಿಡುಗಡೆಗೊಂಡಿದೆ.

ಬೈಕ್ ರೇಸಿಂಗ್ ಕುರಿತ ನೈಜ ಘಟನೆಯಾಧಾರಿತ ಸಿನಿಮಾ ಇದಾಗಿರುವುದಾಗಿ ಚಿತ್ರತಂಡ ಹೇಳಿಕೊಂಡಿದೆ. ಸಿನಿಮಾ ಚಿತ್ರೀಕರಣ ನಡೆಯುತ್ತಿದ್ದು, ಸಂದೇಶ್ ಪ್ರಸನ್ನ ನಾಯಕರಾಗಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಭರತ್ ವಿಷ್ಣುಕಾಂತ್ ನಿರ್ದೇಶನ ಸಿನಿಮಾಗಿದೆ.

ಸಿನಿಮಾದಲ್ಲಿ ಆಧುನಿಕ ಹುಡುಗಿಯಾಗಿ ಬಣ್ಣ ಹಚ್ಚಿರುವ ಅಕ್ಷಿತಾ, ತಮ್ಮ ಪಾತ್ರದ ಕುರಿತು ಸಂತಸದಿಂದ ಮಾತನಾಡಿದ್ದಾರೆ. 'ಸಿನಿಮಾಗೆ ಬರಬೇಕೆಂಬ ಬಹುಕಾಲದ ನನ್ನ ಕನಸು ನನಸಾಗಿದೆ. ಕನ್ನಡ ಸಿನಿಮಾಗೆ ಬೈಕ್ ರೇಸರ್ ಆಗಿ ಬರುತ್ತಿದ್ದೇನೆ. ಓದುವ ದಿನಗಳಲ್ಲಿ ಎನ್‌ಸಿಸಿಯಲ್ಲಿದ್ದುದು ಹಾಗೂ ಅಥ್ಲೀಟ್ ಆಗಿದ್ದುದು ನನಗೆ ಬೈಕ್ ರೈಡಿಂಗ್ ಕಲಿಯಲು ತುಂಬಾ ಸಹಾಯ ಮಾಡಿತು' ಎಂದು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ. ಇದೇ ಸಂದರ್ಭ, ಪೌರಾಣಿಕ ಪಾತ್ರಗಳಲ್ಲಿ ಕಾಣಿಸಿಕೊಳ್ಳುವ ಬಯಕೆಯನ್ನೂ ವ್ಯಕ್ತಪಡಿಸಿದ್ದಾರೆ. ■